ಆಗಬಹುದು, ಎರಡು ದಿವಸ ಆಗಬಹುದು, ಮೂರು ದಿವಸ ಆಗಬಹುದು. ಚರ್ಚೆ ಪ್ರಾರಂಭ ಮಾಡಿದ ಮೇಲೆ ಚರ್ಚೆ ಪೂರ್ಣ ಆಗುವವರೆಗೂ ಕುಳಿತುಕೊಳ್ಳಬೇಕು. ಒಬ್ಬರದು ಆದಮೇಲೆ ಇನ್ನೊಬ್ಬರು ಮಾಡುತ್ತಾರೆ. ಮತ್ತು ಲೆಜಿಸ್ಲೇಟರ್ಸ್ ಏನಿದ್ದಾರೆ, ಅವರೂ ಕೂಡ ಪ್ರಾಪರ್ ಆಗಿ ಅದನ್ನು ಪ್ರೊಜೆಕ್ಟ್ ಮಾಡಬೇಕು, ವಿಷಯ ಸಮಿತಿ ನಡೆಯಬೇಕಾದಂಥ ರೀತಿ ನೀತಿಗೂ ಬೇರೆ ರೀತಿ ನೀತಿಗೆ ವ್ಯತ್ಯಾಸ ಇದೆ. ಇಲ್ಲಿ ಮಾಡತಕ್ಕಂಥ ಕಾರ್ಯಕ್ರಮಗಳನ್ನು ಸರಿಯಾದ ರೀತಿಯಲ್ಲಿ ನೀವು ನಮಗೆ ವಿವರಿಸಿ ಹೇಳಲಿಲ್ಲ. ಹಾಗಾಗಿ ಏನಾಗಿದೆ ಎಂದರೆ ಬೇರೆ ಶಾಸಕಾಂಗದ ಸಮಿತಿಯು ಹೇಗೆ ಕೆಲಸ ಮಾಡುತ್ತವೆ, ಆಡಿಟ್ ರಿಪೋರ್ಟ್‌ನ್ನು ಇಟ್ಟುಕೊಂಡು ಅವುಗಳ ಮೇಲೆ ಚರ್ಚೆ ಮಾಡಿದ ಹಾಗೆ, ಇವತ್ತು ಒಂದು ಕಡತವನ್ನು ಇಟ್ಟುಕೊಳ್ಳುವುದು, ಅದನ್ನು ನೋಡುವುದು, ಅದರ ಮೇಲೆ ಮಾಡುವುದು ಆಗಿದೆ. ಮತ್ತೊಂದು ವಿಚಾರ ಹೇಳುತ್ತೇನೆ, ಯಾವುದೋ ಒಂದು ರೆಕಾರ್ಡ ಇಟ್ಟುಕೊಳ್ಳವುದು, ಇದಲ್ಲ. ದಯವಿಟ್ಟು ನೀವೂ ಕೂಡ ನಮ್ಮ ಈ ವಿಷಯ ಸಮಿತಿಗಳಿಗೆ ಚರ್ಚೆ ಮಾಡತಕ್ಕಂಥ ವಿಧಾನವನ್ನು, ಹೇಗೆ ಬೇಡಿಕೆಗಳ ಮೇಲೆ ಚರ್ಚೆ ಪ್ರಾರಂಭವಾದರೆ ಆ ಚರ್ಚೆ ಪೂರ್ಣವಾಗುವವರೆಗೆ, ಆ ಬೇಡಿಕೆ ಪೂರ್ಣವಾಗುವವರೆಗೆ, ಮಂಜೂರಾತಿ ಪಡೆಯುವವರೆಗೆ ಚರ್ಚೆ ಇರುತ್ತದೆಯೋ ಆ ರೀತಿ ಅಲ್ಲಿಯೂ ಮಾಡುವುದಕ್ಕೆ ನೀವು ಸ್ವಲ್ಪ ಮಾರ್ಗಸೂಚಿಗಳನ್ನು ಕೂಡಬೇಕು. ಆಗ ಮಾತ್ರ ಇದು ಯಶಸ್ವಿಯಾಗುತ್ತದೆ.

ಪ್ರಸ್ತಾವದ ಅಂಗೀಕಾರ

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ :

"ಕರ್ನಾಟಕ ವಿಧಾನ ಸಭೆಯ ನಿಯಮಗಳ ಸಮಿತಿಯು ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳಿಗೆ ತಿದ್ದುಪಡಿ ತರುವ ಬಗ್ಗೆ ಮಂಡಿಸಿದ ವರದಿಯನ್ನು ಅಂಗೀಕರಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವರದಿಗೆ ಒಪ್ಪಿಗೆ ನೀಡಲಾಯಿತು.

10.30 ಎ.ಎಂ.

ಉಪಾಧ್ಯಕ್ಷರ ಅಪ್ಪಣೆಯ ಮೇರೆಗೆ ಪ್ರಸ್ತಾಪಿಸಲಾದ ವಿಷಯ

ತುಂಗ ಭದ್ರಾ ಎಡದಂಡೆ ಕಾಲುವೆಯಿಂದ 15ನೇ ಏಪ್ರಿಲ್ 1996ರವರೆಗೆ ನೀರು ಬಿಡುವ ಬಗ್ಗೆ.

+ಶ್ರೀ ಶ್ರೀರಂಗ ದೇವರಾಯಲು (ಗಂಗಾವತಿ) : ಮಾನ್ಯ ಅಧ್ಯಕ್ಷರೇ, ನಾನು ತುಂಗಭದ್ರಾ ಎಡದಂಡಾ ಕಾಲುವೆಯ ಬಗ್ಗೆ ಸ್ವಲ್ಪ ಮಾತನಾಡಬೇಕಾಗಿದೆ. ರೈತರ ಒಂದು ಕಳಕಳಿಯಿಂದ ನಾನು ಈ ಸರ್ಕಾರಕ್ಕೆ ವಿನಂತಿಯನ್ನು ಮಾಡಿಕೊಳ್ಳುವುದೆನೆಂದರೆ, 31ನೇ ಮಾರ್ಚ್ 1996 ರಿಂದ ತುಂಗಾಭದ್ರಾ ಎಡ-ದಂಡೆ ಕಾಲುವೆಗೆ ನೀರು ಬಿಡುವುದನ್ನು ನಿಲ್ಲಿಸಬೇಕೆಂದು ಗೌರ್ನಮೆಂಟ್

ಒಂದು ಆದೇಶವನ್ನು ಕೊಟ್ಟಿದೆ. ಆದರೆ ಗಂಗಾವತಿಯ ಷುಗರ್ ಫ್ಯಾಕ್ಟರಿಯು 10ನೇ ಮೇ 1996ರ ವರೆಗೆ ನಡೆಯುತ್ತದೆ. ಮಾರ್ಚ್ ತಿಂಗಳಿನಿಂದ ಮೇ ತಿಂಗಳವರೆಗೆ ಎರಡು ತಿಂಗಳುಗಳ ಕಾಲ ಕಬ್ಬಿಗೆ ನೀರು ಇಲ್ಲದಿದ್ದರೆ ಕಬ್ಬು ಒಣಗಿ ಹೋಗಿ, ಇಳುವರಿ ಕಡಿಮೆಯಾಗಿ ಷುಗರ್ ಫ್ಯಾಕ್ಟರಿಗೂ ನಷ್ಟವಾಗುತ್ತದೆ. ಮತ್ತು ರೈತರಿಗೂ ಇದರಿಂದ ಬಹಳ ಅನ್ಯಾಯವಾಗುತ್ತದೆಂದು ನಾನು ಭಾವಿಸುತ್ತಿದ್ದೇನೆ. ಬೇಕಾದರೆ ಇದರ ಬಗ್ಗೆ ಕೃಷಿ ತಜ್ಞರನ್ನು ಸಹ ಕೇಳಬಹುದು. ಸ್ವಲ್ಪ ವಾತಾವರಣ ಹೆಚ್ಚು ಕಡಿಮೆಯಿಂದ ಕಬ್ಬಿನ ಕಟಾವು ಸ್ವಲ್ಪ ಲೇಟಾಗುತ್ತದೆ. ಆದುದರಿಂದ ದಯಮಾಡಿ ಸರ್ಕಾರವನ್ನು ಕೇಳುವುದು ಏನೆಂದರೆ, 15ನೇ ಏಪ್ರಿಲ್ 1996ರವರೆಗೆ ಅಲ್ಲಿನ ರೈತರಿಗೆ ಬೆಳೆಗೆ ಬೇಕಾದಂತಹ ನೀರನ್ನು ಕೊಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೆ, ನೀರು ಕೊಡುವ ವಿಷಯದಲ್ಲಿ ಮಾನ್ಯ ಸದಸ್ಯರು ಮಾತನಾಡುತ್ತಿದ್ದಾರೆ, ಇದಕ್ಕೆ ಸಂಬಂಧಪಟ್ಟಂತಹ ಸ್ಟೇಟ್ ಮಿನಿಸ್ಟರ್‌ಗಳಾದರೂ ಈ ಸದನದಲ್ಲಿ ಇದ್ದರೆ ಒಳ್ಳೆಯದು ಆಗುತ್ತಿತ್ತು. ಆದರೆ ಅವರುಗಳು ಯಾರೂ ಇಲ್ಲ. ಇನ್ನು ಎರಡೇ ದಿವಸ ಈ ಸದನ ನಡೆಯುವುದು ಸಂಬಂಧಪಟ್ಟಂತಹ ಮಂತ್ರಿಗಳು ಎಲ್ಲಿಗೆ ಹೋಗುತ್ತಾರೆ? ಎಲ್ಲರಿಗೂ ಸಂಬಂಧಪಟ್ಟಿರತಕ್ಕಂತಹ ವಿಷಯವೇ ಆಗಿರುವುದರಿಂದ ದಯವಿಟ್ಟು ಸಂಬಂಧಪಟ್ಟಂತಹ ಮಂತ್ರಿಗಳನ್ನು ಈ ಸದನಕ್ಕೆ ಕರೆಯಿಸಿ ಏನಾದರೂ ನೀರನ್ನು ಬಿಡತಕ್ಕಂತಹ ವಿಷಯದಲ್ಲಿ ಸ್ಟೇಟಮೆಂಟ್‌ನ್ನು ಕೊಡಿಸಿ.

ಶ್ರೀ ಎಂ. ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಗಂಗಾವತಿ ಷುಗರ್ ಫ್ಯಾಕ್ಟರಿಗೆ ಸಂಬಂಧಪಟ್ಟ ಹಾಗೆ 31ನೇ ಮಾರ್ಚ್‌ಗೆ ನೀರನ್ನು ನಿಲ್ಲಿಸುವುದನ್ನು ಬಿಟ್ಟು ಏಪ್ರಿಲ್ ಅಥವಾ ಮೇ ವರೆಗೆ ನೀರನ್ನು ಕೊಡಲಿಕ್ಕೆ ಇರತಕ್ಕಂಥದ್ದಕ್ಕೆ ತಾವು ಸಹಕಾರವನ್ನು ಕೊಡಬೇಕೆಂಬ ವಿಚಾರವನ್ನು ಎತ್ತಿದ್ದಾರೆ. ನಾನು ಈ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ. ಇದರ ಬಗ್ಗೆ ಹೇಳುವುದಾದರೆ ಮಾರ್ಚ್ 31ನೇ ತಾರೀಖಿನ ವರೆಗೆ ಎಂದು ಏಕೆ ನಿಗದಿ ಮಾಡಿದ್ದಾರೆ ಎಂದರೆ, ನೀರಿನ ಮಟ್ಟವನ್ನು ನೋಡಿಕೊಂಡು ಆಮೇಲೆ ಕ್ರಮವನ್ನು ಕೈಗೊಳ್ಳಬೇಕಾಗಿರುವುದು. ತಾವೂ ಸಹ ಸರ್ಕಾರ ನಡೆಸಿದ್ದೀರಿ. ಆದುದರಿಂದ ಇದರ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರತಕ್ಕಂತಹ ವಿಷಯವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೂ ಕೂಡ ತರುತ್ತೇನೆ. ಬಹುಶಃ ನಾವು ಯಾವ ರೀತಿಯಲ್ಲಿ ಪರಿಹಾರವನ್ನು ಹುಡುಕಬೇಕು ಎನ್ನುವುದಕ್ಕೆ, ಷುಗರ್ ಫ್ಯಾಕ್ಟರಿ ಕಾರ್ಯವನ್ನು ಮುಂದುವರೆಸಬೇಕು, ಅಲ್ಲಿ ಸಕ್ಕರೆ ಉತ್ಪಾದನೆಯಾಗಬೇಕು ನಮಗೆ ಲಾಭ ಬರಬೇಕು ಎಂದು ಹೇಳತಕ್ಕಂತಹ ಚಿಂತನೆ ನಮಗೆ ಇಲ್ಲವೇ? ಇದರ ಬಗ್ಗೆ ನಮ್ಮ ಸರ್ಕಾರ ಏನಾದರೂ ಒಂದು ಕಾರ್ಯಕ್ರಮವನ್ನು ಕೈಗೊಳ್ಳುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೆ, ಶ್ರೀ ಶ್ರೀರಂಗದೇವರಾಯಲು ಅವರು ಅನಾವಶ್ಯಕವಾಗಿ ಯಾವುದೇ ವಿಚಾರವನ್ನು ಸದನಕ್ಕೆ ತರುವುದಿಲ್ಲ. ಯಾವುದು ಅವರಿಗೆ ಸಂಬಂಧಿಸಿದ್ದು, ಅದರ ಬಗ್ಗೆ ಮಾತ್ರವೇ ಅವರು ಯಾವಾಗಲೂ ಪ್ರಸ್ತಾಪಿಸುತ್ತಾರೆ. ಈ

ಸದನದಲ್ಲಿ ಎತ್ತುವುದಿಲ್ಲ. ಯಾವುದು ಆಗುತ್ತದೆ ಮತ್ತು ಆ ಭಾಗದ ರೈತರಿಗೆ ನೀರನ್ನು ಕೊಡತಕ್ಕಂತಹ ಸಾಧ್ಯತೆ ಇದ್ದಾಗ ಮಾತ್ರ ಈ ಪ್ರಶ್ನೆಯನ್ನು ಕೇಳಿದ್ದಾರೆ. ಈ ಭಾಗಕ್ಕೆ ಹಿಂದೆ ಸಹ ನೀರನ್ನು ಕೊಡುತ್ತಾ ಬಂದಿದ್ದಾರೆ, ಇವತ್ತು ಅದೇ ರೀತಿಯಾಗಿ ಆ ಭಾಗದ ರೈತರಿಗೆ ನೀರನ್ನು ಕೊಡಿ ಎಂದು ಆ ಪ್ರಶ್ನೆಯನ್ನು ಕೇಳಿದ್ದಾರೆ. ಈ ಭಾಗಕ್ಕೆ ಹಿಂದೆ ಸಹ ನೀರನ್ನು ಕೊಡುತ್ತಾ ಬಂದಿದ್ದಾರೆ, ಇವತ್ತು ಅದೇ ರೀತಿಯಾಗಿ ಆ ಭಾಗದ ರೈತರಿಗ ನೀರನ್ನು ಕೊಡಿ ಎಂದು ಆ ಪ್ರಶ್ನೆಯನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಆದುದರಿಂದ ಇದರ ಬಗ್ಗೆ ಒಂದು ಸ್ಟೇಟ್‌ಮೆಂಟ್ ಮಾಡಿಸಿ ಅಥವಾ ಸಂಬಂಧಪಟ್ಟಂತಹ ಸ್ಟೇಟ್ ವಿಷಯವನ್ನು ಮುಖ್ಯಮಂತ್ರಿಗಳಿಗೆ ಕೊಟ್ಟರೆ ಹೇಗೆ? ಮುಖ್ಯಮಂತ್ರಿಗಳ ಕೆಳಗಡೆ ಒಂದೊಂದು ವಿಷಯಕ್ಕೆ ಸಂಬಂಧಿಸಿದಂತೆ ಒಬ್ಬೊಬ್ಬ ಮಂತ್ರಿಗಳು ಇದ್ದಾರಲ್ಲಾ?

ಶ್ರೀ ಎಂ. ಸಿ. ನಾಣಯ್ಯ : ಮಾನ್ಯ ಉಪಾಧ್ಯಕ್ಷರೆ, ಈಗ ಮಾನ್ಯ ಸದಸ್ಯರು ಉಪಾಧ್ಯಕ್ಷರ ಅಪ್ಪಣೆಯನ್ನು ಪಡೆದು ದಿಢೀರ್ ಎಂದು ಈ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಇದರ ಬಗ್ಗೆ ಒಂದು ನೋಟೀಸನ್ನು ಕೊಟ್ಟಿದ್ದರೆ ಇದರ ಬಗ್ಗೆ ಏನಾದರೂ ಹೇಳಿಕೆಯನ್ನು ಕೊಡಬಹುದಾಗಿತ್ತು. ಅವರಿಗೆ ಮಾಹಿತಿಯು ನಿನ್ನೆ ರಾತ್ರಿ ಸಿಕ್ಕಿರಬಹುದು. ಅವರು ಈಗ ಈ ವಿಷಯವನ್ನು ಈಗ ಪ್ರಸ್ತಾಪ ಮಾಡಿದ್ದಾರೆ; ಇದನ್ನು ಸರ್ಕಾರ ಗಮನಿಸಿ, ಇದರ ಬಗ್ಗೆ ಒಂದು ಹೇಳಿಕೆ ಕೊಡಿಸಲಿಕ್ಕೆ ಪ್ರಯತ್ನವನ್ನು ಮಾಡುತ್ತೇನೆ.

ವಸಂತಕುಮಾರ್ ಶೆಟ್ಟಿಯವರ ಕೊಲೆ ಪ್ರಕರಣವನ್ನು ಸಿ.ಬಿ.ಎ.ಗೆ ಒಪ್ಪಿಸಲು ಒತ್ತಾಯ

+ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೆ, ಮೊನ್ನೆಯ ದಿವಸ ತಮ್ಮ ಗಮನಕ್ಕೆ ಇದೇ ಸದನದಲ್ಲಿ ಶ್ರೀಮಾನ್ ಪ್ರತಾಪ ಚಂದ್ರಶೆಟ್ಟರು ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದರು. ಆಗ ಮಾನ್ಯ ಗೃಹ ಸಚಿವರು ಏನು ಹೇಳಿದರು ಎಂದರೆ, ತಮ್ಮ ಕೊಠಡಿಯಲ್ಲಿಯೇ ವಸಂತಕುಮಾರ್ ಶೆಟ್ಟಿಯವರು ಕೊಲೆ ಪ್ರಕರಣದ ಬಗ್ಗೆ ಸಿ.ಐ.ಬಿ. ತನಿಖೆಗೆ ಒಪ್ಪಿಸಬೇಕೇ ಅಥವಾ ಯಾವ ರೀತಿಯಾಗಿ ಈ ತನಿಖೆಯನ್ನು ಮಾಡಬೇಕು ಎನ್ನುವುದರ ಬಗ್ಗೆ ತಾವು ನನ್ನ ಕೊಠಡಿಯಲ್ಲಿ ಮುಖ್ಯಮಂತ್ರಿಗಳನ್ನು ಕರೆಯಿಸುತ್ತೇನೆ, ಕಾನೂನು ಮತ್ತು ಸಂಸದೀಯ ಮಂತ್ರಿಗಳನ್ನು ಸಹ ಕರೆಸುತ್ತೇನೆ, ಅಮೇಲೆ ನಮ್ಮ ಗೃಹ ಸಚಿವರನ್ನು ಕರೆಸುತ್ತೇನೆ, ಸಂಬಂಧಪಟ್ಟಂತಹ ಅಡ್ವೋಕೇಟ್ ಜನರಲ್‌ನ್ನು ಮತ್ತು ಸಂಬಂಧಪಟ್ಟಂಥವರೆಲ್ಲರನ್ನೂ ಕರೆಯಿಸಿ ಮತ್ತು ನಮ್ಮ ಐ.ಜಿ. ಮತ್ತು ಸಿ.ಐ.ಡಿ.ಯವರು ಎಂದು ಕಾಣುತ್ತದೆ. ಮತ್ತು ಡಿ.ಜಿ.ಪಿ. ಎಲ್ಲರನ್ನು ಕರೆಯಿಸಿ ಒಂದು ಮೀಟಿಂಗ್‌ನ್ನು ಮಾಡಿ ನಾನು ಇದಕ್ಕೆ ಒಂದು ತೀರ್ಮಾನವನ್ನು ತೆಗೆದುಕೊಳ್ಳುತ್ತೇನೆ ಎನ್ನುವಂತಹ ಒಂದು ಮಾತನ್ನು ಅವರು ಹೇಳಿದ್ದರು. ಅದರ ಪ್ರಕಾರ ಅಧ್ಯಕ್ಷರು ಮೀಟಿಂಗ್‌ನ್ನು ಕರೆಯಿಸಿದ್ದರು. ಅದಕ್ಕಾಗಿ ನಾನು ಅಭಿನಂದಿಸುತ್ತೇನೆ. ಆದರೆ ಆ ಸಂದರ್ಭದಲ್ಲಿ ಇದಕ್ಕೆ ಸಂಬಂಧಿಸಿದಂತೆ ಕೆಲವು ಚರ್ಚೆಗಳು ನಡೆಯಿತು. ಆದರೆ ಕೊನೆಯ ವೇಳೆಯಲ್ಲಿ ಸಡನ್ ಆಗಿ ಒಂದು ನಿರ್ಣಯಕ್ಕೆ ಇನ್ನು ಬರಬೇಕಾಗಿತ್ತು. ಆದರೆ ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದರು